ನಗುನಗುತ ಹಗುರವಾಗು (ಭಾವಗೀತೆ) ರಾಗ: ಸೌಖ್ಯದಾಯಿನಿ

ನಗುನಗುತ ಹಗುರವಾಗು ಓ ಮನವೆ।। ವಿಷಗಳಿಗೆ ಬಂದೀತು ರಸಗಳಿಗೆ ಸಂದೀತು ನಗುನಗುತ ಹಗುರವಾಗು ಓ ಮನವೇ। ಬೆಳಕು ನೆಳಲುಗಳಂತೆ, ಸುಖದುಃಖ ಬಂದೀತು। ನಗು ನಗುತ ಹಗುರವಾಗು ಓ ಮನವೇ।।1।। ಕಾಲ ಚಕ್ರವನೊತ್ತಿ ಮುಂದಮುಂದಕೆ ನೂಕಿ ಹಗಲಿರುಳು ಬರುವ ವೋಲು। ಓ ಮನವೇ। ಜೀವನದ ನೌಕೆಯನು ಮುಂದಮುಂದಕೆ ನೂಕಿ ಬಂದಾವು ಗೆಲುವು, ಸೋಲು ಓ ಮನವೇ।।2।।

ಮನದ ಬಾನಂಚಿನಲಿ (ಭಾವಗೀತೆ) ರಾಗ: ಭೌಳಿ

ಮನದ ಬಾನಂಚಿನಲಿ ಕಲೆಯ ರವಿಯುದಯಿಸಿಹನೋ। ಹೃದಯ ಪಕ್ಷಿಗಳ ಗಾನ ಮೊದಲಾಗಿದೆ।। ಏಳು ಓ ನಟರಾಜ ಏಳು ಸಾಹಸ ತೇಜ। ಏಳು ಮುನಿಜನ ಪೂಜ್ಯ ಏಳೈಯ್ಯ ಬೆಳಗಾಯಿತು।। ಈ ಬೆಳಕು ಮುಂಬೆಳಕು ಮನುಜ ಹೃದಯದಿ ಬೆಳಕ। ಹರಿಸಿಹ ಚಿಂಬೆಳಕು ಸೊಬಗ ನೀ ರಸಿಕ ಮಾನ್ಯರೆಲ್ಲರಿಗೆ। ಮೆಲ್ಲ ಮೆಲ್ಲನೆ ಬೀಸುಗಾಳಿ।। ತರುಲತಾದಿಗಳು ಕೊನರಿ ಚಿಗುರಿ ಸುಮಗಳ ತಳೆಯುತೆ ಪರಿಮಳ ಬೀರಿ। ಸರ್ವರ ಎದೆಯಲಿ ಸತ್ಯವ ತೋರಿ ಸರಳ ಜೀವನದ ಮಂತ್ರವ ಸಾರಿ। ಕೂಕೂ ಕೋಗಿಲೆಗಾನದಿ ಮೈ ಮರೆಯುತಿದೆ ಸರಳ ಜೀವನದ ಮಂತ್ರವ ಸಾರಿ ಸೊಬಗಿನ ವನವೇ ಸತ್ಯದ ನೆಲೆಯು।।

ಮನಶುದ್ಧಿ ಇಲ್ಲದವರಿಗೆ (ಉಗಾಭೋಗ) ರಾಗ: ಷಣ್ಮುಖಪ್ರಿಯ

ಮನಶುದ್ಧಿ ಇಲ್ಲದವರಿಗೆ ಮಂತ್ರದ ಫಲವೇನು ತನುಶುದ್ಧಿಯಿಲ್ಲದವಗೆ ತೀರ್ಥದ ಫಲವೇನು ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ ಮಿಂದಲ್ಲಿ ಫಲವೇನು ಶ್ರೀ ಶೈಲದ ಕಾಗೆಯಂತೆ ಹೊರಗೆ ಮಿಂದು ಒಳಗೆ ಮೀಯದವರ ಕಂಡು ಬೆರಗಾಗಿ ನಗುತ್ತಿದ್ದ ಪುರಂದರವಿಠಲ।।

ಲಘುವಾಗೆಲೆ ಮನ ರಾಗ: ಕಾನಡ-ಏಕತಾಳ

ಲಘುವಾಗೆಲೆ ಮನ ಗೆಲುವಾಗೆಲೆ ಮನ। ಹಾರು ನನ್ನ ಬಿಟ್ಟು ಹಾರಿ ಹರಿಯ ಮುಟ್ಟು।।ಪ।। ನನಗಂಟಲು ನೀನಾಗುವೆ ಕಲ್ಮಶ ನನ್ನ ತೊರೆಯೆ ನೀ ನಿರ್ಮಲ ನಿಷ್ಕಳ ಹರಿಯೊ। ನನ್ನ ಬಿಟ್ಟು ಮುಂಬರಿದು ಹರಿಯ ಮುಟ್ಟು।।1।। ನೀಲದಾಗಸದ ಹರಹೊಳು ಹಾರುತ ಅಂಚೆಯಂತೆ ಮುಗಿಲಂಚನು ಸೇರುತ। ಕ್ಷೀರಾಬ್ಧಿಶಾಯಿ ಶ್ಯಾಮಸುಂದರನ ಉಸಿರೊಳಾಡು ನೀನವನುಸಿರಾಗುತ।।2।। ಬೆಳಕಿಗೊಲಿದು ಬಿರಿದಲರಿನೆಲರು ಬರೆ ಪೋಗು ಸಂಗಡೆಲೆ ನೀ ಮನವೆ। ಮುಗ್ಧರುಲಿವ ನಗೆ ಮಾತುಗಳಾಲಿಸಿ ನಂದಗೋಕುಲವ ನೆನೆಮನವೆ।।3।। ಗರಿಮುದುರಿಸುವ ಒಳಲಂಟನು ಕರಗಿಸೆ ಶ್ಯಾಮನ ಮೈಬಣ್ಣದಿ। ನೆನೆಯೊ ಮಿಂದೇಳುತಲಾ ಪುಣ್ಯ ಕಾಳಿಮದಿ ಚೆಲುಗಂಗಳ ತೇಜದಿ ಬೆರೆಯೋ।।4।।

ನಾಮಸ್ಮರಣೆಸ್ತುತಿ

ದೇವರನಾಮ

ಏನೇನು ದಾನವ ಮಾಡಲಿ ರಾಗ: ಶುಭಪಂತುವರಾಳಿ, ಛಾಪುತಾಳ

ಏನೇನು ದಾನವ ಮಾಡಲಿ, ಹರಿ ಧ್ಯಾನಕ್ಕೆ ಸಮವಾದ ದಾನಂಗಳುಂಟೆ।।ಪ।। ಶತಕೋಟಿ ಕನ್ಯಾಪ್ರದಾನವ ಮಾಡಲಿ। ಅತಿಶಯ ಉದಕ್ಕೆ ದಾನವ ಮಾಡಲಿ। ಮತಿಶುದ್ದನಾಗಿ ಭೂದಾನವ ಮಾಡಲಿ। ಕೃತಿರಮಣನ ಧ್ಯಾನಕ್ಕೆ ಸರಿಯುಂಟೆ।।1।। ದಿನಕೊಂದು ಸಾವಿರ ಗೋದಾನಮಾಡಲಿ। ಅನುದಿನ ಅನ್ನದಾನವ ಮಾಡಲಿ। ಘನವಾಗಿ ಸುವರ್ಣ

ದಾನವಮಾಡಲಿ। ವನಜನಾಭನ ಧ್ಯಾನಕ್ಕೆ ಸರಿಯುಂಟೆ॥2॥ ಸಾದರದಿ ತರ್ಕ ವ್ಯಾಕರಣ ಪೇಳಲಿ। ವೇದ ಗೀತ ಭಾಷ್ಯವ ನೋದಲಿ। ಸಾಧಿಸಿ ಸ್ನಾನ ಜಪಂಗಳ ಮಾಡಲಿ। ಮಾಧವನ ಧ್ಯಾನಕ್ಕೆ ಸರಿಯುಂಟೆ॥3॥ ಉತ್ತಮವಾದ ವಸ್ತ್ರವ ದಾನಮಾಡಲಿ। ಮುತ್ತು ಮಾಣಿಕ್ಯ ದಾನವ ಮಾಡಲಿ। ಅತ್ಯಂತ ವಿದ್ಯಾಪ್ರದಾನವ ಮಾಡಲಿ। ಚಿತ್ತಜಪಿತನ ಧ್ಯಾನಕ್ಕೆ ಸರಿಯುಂಟೆ॥4॥ ನಾನಾ ತೀರ್ಥಗಳಲಿ ಸ್ನಾನವ ಮಾಡಲಿ। ಕಾನನದೊಳಗೆ ತಪವ ಮಾಡಲಿ। ಜ್ಞಾನದಿಂದ ಶಾಸ್ತ್ರಾರ್ಥಮಾಡಲಿ। ನಿನ್ನ ಧ್ಯಾನಕ್ಕೆ ಸರಿಯುಂಟೆ ಪುರಂದರವಿಠಲ॥5॥

ಓಂ ರಾಂ ಶ್ರೀರಾಂ — **ರಾಗ: ಸಿಂಧುಭೈರವಿ**

ಓಂ ರಾಂ ಶ್ರೀರಾಂ ಜಯರಾಂ ಎನ್ನುತ ರಾಮನಾಮವನು ಪಾಡಿ ಕುಣಿಯುತ ದಾಟು ಭವಕಡಲ ಸ್ಮರಣೆಯೊಳಿರುತ ಸಾಟಿಯಿದೆಯೆ ರಾಮನಾಮಕೆಂದೆನುತಾ॥ಪ॥ ಇಹಪರ ಕಲ್ಯಾಣ ತಾರಕನಾಮ ಸಹನಾ ಶಕ್ತಿಯ ಕರುಣಿಪ ನಾಮ ಕಹಿಸಿಹಿ ದ್ವಂದ್ವವ ಬಿಡಿಸುವ ನಾಮ ಮಹಿಮಾನ್ವಿತ ರಘುರಾಮನ ನಾಮ॥1॥ ದುಷ್ಟ ಜನರುಗಳ ತರಿದಿಹ ನಾಮ ಶಿಷ್ಟ ಜನರನು ಪೊರೆಯುವ ನಾಮ ಇಷ್ಟಾರ್ಥಗಳ ಕೈಗೂಡಿಪ ನಾಮ ಕಷ್ಟ ಪರಿಹರಿಪ ರಾಮನ ನಾಮ॥2॥ ಕ್ಲೇಶಗಳೆಲ್ಲವ ಕಳೆಯುವ ನಾಮ ದೋಷ ಸಮಸ್ತವ ಹರಿಸುವ ನಾಮ ಕೇಶವ ದಾಸನುತ ಮುದ್ದು ನಾಮ ಸಾಸಿರ ನಾಮಕ್ಕೆಣೆ ರಾಮನಾಮ॥3॥

ತಾರಕ್ಕ ಬಿಂದಿಗೆ ನೀರಿಗೆ — **ರಾಗ: ತಿಲಂಗ್-ಛಾಪುತಾಳ**

ತಾರಕ್ಕ ಬಿಂದಿಗೆ ನೀರಿಗೆ ಹೋಗುವೆ ತಾರೇ ಬಿಂದಿಗೆಯ॥ಪ॥ ಬಿಂದಿಗೆ ಒಡೆದರೆ ಒಂದೇ ಕಾಸು ತಾರೇ ಬಿಂದಿಗೆಯ॥ಅ.ಪ॥ ರಾಮನಾಮವೆಂಬ ರಸವುಳ್ಳ ನೀರಿಗೆ ತಾರೇ ಬಿಂದಿಗೆಯ। ಕಾಮಿನಿಯರ ಕೂಡೆ ಏಕಾಂತವಾಡೇನು ತಾರೇ ಬಿಂದಿಗೆಯ॥1॥ ಗೋವಿಂದಯೆಂಬುವ ಗುಣವುಳ್ಳ ನೀರಿಗೆ ತಾರೇ ಬಿಂದಿಗೆಯ। ಆವಾವ ಪರಿಯಲ್ಲಿ ಅಮೃತದ ನೀರಿಗೆ ತಾರೇ ಬಿಂದಿಗೆಯ॥2॥ ಬಿಂದುಮಾಧವನ ಘಟ್ಟಕ್ಕೆ ಹೋಗುವೆ ತಾರೇ ಬಿಂದಿಗೆಯ। ಪುರಂದರ ವಿಠಲಗೆ ಅಭಿಷೇಕ ಮಾಡುವೆ ತಾರೇ ಬಿಂದಿಗೆಯ॥3॥

ಧರ್ಮವೇ ಜಯವೆಂಬ ದಿವ್ಯಮಂತ್ರ — **ರಾಗ: ಸಾವೇರಿ, ಆದಿತಾಳ**

ಧರ್ಮವೇ ಜಯವೆಂಬ ದಿವ್ಯಮಂತ್ರ॥ಪ॥ ಮರ್ಮವನರಿತು ಮಾಡಲಿಬೇಕು ತಂತ್ರ॥ಅ.ಪ.॥ ವಿಷವಿಕ್ಕಿದವಗೆ ಷಡ್ರಸವನುಣಿಸಲಿಬೇಕು। ದ್ವೇಷ ಮಾಡಿದವನ ಪೋಷಿಸಲಿಬೇಕು। ಪುಸಿ ಮಾಡಿ ಕೆಡಿಸುವನ ಹಾಡಿ ಹರಸಲಿಬೇಕು। ಮೋಸ ಮಾಡುವನ ಹೆಸರು ಮಗನಿಗಿಡಬೇಕು॥1॥ ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು। ಬಂಧನದೊಳಿಟ್ಟವರ ಬೆರೆಯಬೇಕು। ಕೊಂದ ವೈರಿಯ ಮನೆಗೆ ನಡೆದು ಹೋಗಲಿಬೇಕು। ಕುಂದೆಣಿಸುವವರ ಗೆಳೆತನ ಮಾಡಬೇಕು॥2॥ ಕೊಂಡೊಯ್ದು ಬಡಿಯುವರ ಕೊಂಡಾಡುತಿರಬೇಕು। ಕಂಡು ಸಹಿಸದವರ ಕರೆಯಬೇಕು। ಪುಂಡರೀಕಾಕ್ಷ ಶ್ರೀ ಪುರಂದರವಿಠ್ಠಲನ। ಕೊಂಡಾಡಿ ತಾ ಧನ್ಯನಾಗಬೇಕು॥3॥

ನಾ ಡೊಂಕಾದರೇನೋ — **ರಾಗ: ನಾದನಾಮಕ್ರಿಯೆ, ಏಕತಾಳ**

ನಾ ಡೊಂಕಾದರೇನೋ ನಿನ್ನ ನಾಮ ಡೊಂಕೆ ವಿಠಲ॥ಪ॥ ನದಿಯು ಡೊಂಕಾದರೇನು ಉದಕ ಡೊಂಕೆ ವಿಠಲ॥1॥ ಕಬ್ಬು ಡೊಂಕಾದರೇನು ಸಿಹಿ ಡೊಂಕೆ ವಿಠಲ॥2॥ ಪುಷ್ಪ ಡೊಂಕಾದರೇನು ಪರಿಮಳ ಡೊಂಕೆ ವಿಠಲ॥3॥ ಆಕಳು ಡೊಂಕಾದರೇನು ಹಾಲು ಡೊಂಕೆ ವಿಠ್ಠಲ॥4॥ ಬಿಲ್ಲು ಡೊಂಕಾದರೇನು ಬಾಣ ಡೊಂಕೆ ವಿಠ್ಠಲ॥5॥ ನಾನು ಹೊಲೆಯನಾದರೆ ನಿನ್ನ ನಾಮ ಹೊಲೆಯೆ ವಿಠಲ॥6॥ ಅಜ್ಞನಾದರೇನು ಕಾಯೊ ಸುಜ್ಞ ಪುರಂದರವಿಠಲ॥7॥

ನಾನೇನು ಬಲ್ಲೆನೋ ನಿಮ್ಮ **ರಾಗ:ಕಲ್ಯಾಣಿ ಛಾಪುತಾಳ**

ನಾನೇನು ಬಲ್ಲೆನೋ ನಿಮ್ಮ ಆ ಸ್ಮರಣೆಯ ಮಾಡುವುದು। ಉಪದೇಶ ಮಂತ್ರವನು ದಯಮಾಡೋ ದೇವಾ।।ಪ।। ಭಾಷೆಗಳ ಕೊಟ್ಟು ಪಾಲಿಸುವಂಥ ದೊರೆ ನೀನು। ಕ್ಷಣಕ್ಷಣಕೆ ಅವಗುಣ ಚಂಡಾಲ ನಾನು। ಲೋಕ ರಕ್ಷಣೆ ಮಾಡೋ ಲೋಕೇಶ್ವರನು ನೀನು। ಪರರ ದೂಷಣೆ ಮಾಡೋ ಪಾತಕಿಯು ನಾನು।।1।। ಆಂಜನೇಯನ ಬಲ್ಲ ಅಕ್ರೂರ ತಾಬಲ್ಲ। ವಿದುರ ಭಕ್ತನು ಬಲ್ಲ ವಿಭೀಷಣನು ಬಲ್ಲ। ಘೋರ ರೂಪನಾಗಿರುವ ಸಮಯದಲ್ಲಿ ನಿಮ್ಮ । ಸ್ಮರಣೆಯ ಮಾಡುವುದು ಪ್ರಹ್ಲಾದ ಬಲ್ಲ।।2।। ವ್ಯಾಸಭಟ್ಟನು ಬಲ್ಲ ವಾಲ್ಮೀಕಿ ಮುನಿ ಬಲ್ಲ। ಗಜದಾಸ ಬಲ್ಲ ದ್ರೌಪದಿ ಬಲ್ಲಳೋ। ನಿಮ್ಮ ನೆನೆಯದೆ ಕೆಟ್ಟೆ ಈಗ ಮನದೊಳ್‌ಗಿಟ್ಟ। ವಿಷಯಗಳೆಲ್ಲವು ಬಿಟ್ಟೆ ನಿಮ್ಮ ಪಾದವ ಬಿಡದೆ ವರಪಟ್ಟೆ।।3।। ದನುಜರನು ಮರ್ದಿಸಿದೆ ಅಮರನನು ರಕ್ಷಿಸಿದೆ। ಅಮರರು ನಿಮ್ಮ ಪೂಜೆಯ ಮಾಡಲಾಗಿ। ಕಮಲಾಕ್ಷ ಕೈವರದ ಅಮರ ನಾರೇಯಣ। ಹರಿ ನಿಮ್ಮ ನಾಮವನು ಭಜಿಸಿದೆನೋ ಕೃಷ್ಣಾ।।4।।

ನೀನ್ಯಾಕೋ ನಿನ್ನ ಹಂಗ್ಯಾಕೋ **ರಾಗ: ಕಾನಡ, ಆದಿತಾಳ**

ನೀನ್ಯಾಕೋ, ನಿನ್ನ ಹಂಗ್ಯಾಕೋ।।ಪ।। ನಿನ್ನ ನಾಮದ ಬಲವೊಂದಿದ್ದರೆ ಸಾಕೊ।।ಅ.ಪ।। ಆ ಮರ ಈ ಮರ ಧ್ಯಾನಿಸುತಿರುವಾಗ ರಾಮ ರಾಮ ಎಂಬ ನಾಮವೆ ಕಾಯ್ತೊ।।1।। ಬಾಲೆಯ ಸಭೆಯಲಿ ಸೀರೆಯ ಸೆಳೆವಾಗ ಬಾಲಕೃಷ್ಣನೆಂಬ ನಾಮವೆ ಕಾಯ್ತೊ।।2।। ಯಮನ ದೂತರು ಬಂದು ಅಜಾಮಿಳನೆಳೆವಾಗ ನಾರಾಯಣನೆಂಬ ನಾಮವೆ ಕಾಯ್ತೊ।।3।। ಕರಿ ಮಕರಿಗೆ ಸಿಕ್ಕಿ ಮೊರೆಯಿಡುತಿರುವಾಗ ಆದಿಮೂಲನೆಂಬ ನಾಮವೆ ಕಾಯ್ತೊ।।4।। ಪ್ರಹ್ಲಾದನ ಪಿತ ಬಾಧಿಸುತಿರುವಾಗ ನಾರಸಿಂಹನೆಂಬ ನಾಮವೆ ಕಾಯ್ತೊ।।5।। ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ ವಾಸುದೇವನೆಂಬ ನಾಮವೆ ಕಾಯ್ತೊ।।6।। ನಿನ್ನ ನಾಮಕೆ ಸರಿ ಯಾವುದು ಕಾಣೆನೊ ಘನ್ನ ಮಹಿಮ ಸಿರಿ ಪುರಂದರವಿಠಲ।।7।।

ಪಾವನನವ3 ಜಗಕೆ ತುಳಸಿನೆಡೆ **ರಾಗ: ಅಭೇರಿ, ರೂಪಕತಾಳ**

ಪಾವನನವ ಪಾವನನವ ಪಾವನನವ ಜಗಕೆ।।ಪ।। ತುಳಸಿನೆಡೆ ಕೈ ಪಾವನ ದಳವೊಂದಿಡೆ ಕಿವಿ ಪಾವನ। ಸ್ಥಳದ ಮೃತ್ತಿಕೆಯಿಡಲು ಫಣೆಯು ಪಾವನವು।।1।। ಬೆಳೆದ ಬೃಂದಾವನ ಬಳಸಿ ಬಂದವ ಪಾವನ। ತುಳಸಿ ತೀರ್ಥವನೆ ಕೊಂಡಾತನ ತನುವು ಪಾವನವು।।2।। ಏಕಾದಶಿ ವ್ರತ ಪಾವನ ಎಲ್ಲಾ ತೊರೆದವ ಪಾವನ। ನಾಲ್ಕು ಝಾವದ ಜಾಗರಣೆಯಿರಲು ಪಾವನವು।।3।। ಸಾಮವೇದವು ಪಾವನ ಭೂಮಿಪತಿ ನೀ ಪಾವನ। ನಾಮಸ್ಮರಣೆಯು ಪಾವನ ನಾರಾಯಣನಾಮ ಪಾವನವು।।4।। ತಾ ಹೊನ್ನೂರಿ ಸರ್ವೋತ್ತಮನೆಂಬೊ ಸೀಮೆಯು ಪಾವನ। ಪುರಂದರವಿಠಲನು ಇರುವ ಭೂಮಿಯು ಪಾವನ।।5।।

ಬಾ ರಂಗ ಎನ್ನ ನಾಲಿಗೆಯಲಿ **ರಾಗ: ಶಿವರಂಜನಿ, ಆದಿತಾಳ**

ಬಾ ರಂಗ ಎನ್ನ ನಾಲಿಗೆಯಲಿ ಸದಾ ಹರಿನಾರಾಯಣ ನಾಮದ ಸ್ಮರಣೆ ಬಾ ರಂಗ ಶ್ರೀರಂಗ।।ಪ।। ಕುಳಿತಿರುವಾಗಲೂ ನಿಂತಿರುವಾಗಲೂ। ಹಾಡುವಾಗಲು ನಲಿದಾಡುವಾಗಲೂ। ಕೇಡಿಗತನದಿಂದ ನೋಡಿದ ಭಾವದೋಳ್। ನಾ ಮಾಡಿದ ಪಾಪ ಓಡುವ ಹಾಗೆ।।1।। ಕನಸಿನೊಳಾಗಲಿ ಮನಸಿನೊಳಾಗಲಿ। ಕನಸು ಮನಸಿನಲ್ಲಿ ನಿನ್ನ ನೆನಪಿರಲಿ। ಸಂತತ ವರದ ಶ್ರೀ ಪುರಂದರ ವಿಠ್ಠಲನೆ। ಅಂತ್ಯಕಾಲಕ್ಕೂ ನಿನ್ನ ಚಿಂತಿಸುವ ಹಾಗೆ।।2।। ಬಾ ರಂಗ ಶ್ರೀರಂಗ।।

ಮಧುರವು ಮಧುರಾನಾಥನ **ರಾಗ: ಹಿಂದೋಳ-ಆದಿತಾಳ**

ಮಧುರವು ಮಧುರಾನಾಥನ ನಾಮವು। ದಧಿ, ಮಧು, ದ್ರಾಕ್ಷಾ, ಸುಧೆ ರಸಗಳಿಗಿಂತ।।ಪ।। ಸುಂದರ ವದನನ ಅರವಿಂದ ನಯನನ। ನಂದಕುಮಾರನ ಚಿಂದದ ನಾಮವು।।1।। ಯದುಕುಲ ತಿಲಕನ ಸದಮಲ ಚರಿತನ। ಮದನ ಪಿತನ

ನಾಮ ಮುದದಲಿ ಪಾಡಲು।।2।। ಗಾನವಿಲೋಲನ ದಾನವ ಕಾಲನ। ಲೀಲೆಗಳನು ಸದಾ ಲಾಲಿಸಿ ಪೊಗಳಲು।।3।। ಹೇಮ ವಸನನ ಕೋಮಲ ರೂಪನ। ಭಾಮಾಕಾಂತನ ಪ್ರೇಮದ ನಾಮವು।।4।। ಪನ್ನಗ ಶಯನನ ಚಿನ್ಮಯ ರೂಪನ। ಸನ್ನುತಿ ಸಲಿಕೆ ಪ್ರಸನ್ನನ ನಾಮವು।।5।।

ರಾಮ3 ಸೀತಾ ರಾಮ ಎನ್ನಿರೋ **ರಾಗ: ದರ್ಬಾರ್, ರೂಪಕತಾಳ**

ರಾಮ ರಾಮ ರಾಮ ಸೀತಾ ರಾಮ ಎನ್ನಿರೋ।।ಪ।। ಅಮರಪತಿಯ ದಿವ್ಯನಾಮ ಅಂದು ಒದಗದೋ।।ಅ.ಪ.।। ಭರದಿ ಯಮನ ಭಟರು ಬಂದು ಹೊರಡಿರೆಂದು ಮೆಟ್ಟಿ ಮುರಿಯೆ। ಕೊರಳಿಗಾತ್ಮ ಸೇರಿದಾಗ ಹರಿಯ ನಾಮ ಒದಗದೊ।।1।। ಇಂದ್ರಿಯಂಗಳೆಲ್ಲ ಕೂಡಿ ಬಂದು ತನುವ ಮುಸುಕುವಾಗ। ಸಿಂಧುಸುತೆಯ ಪತಿಯ ನಾಮ ಅಂದಿಗೊದಗಿ ಬಾರದೊ।।2।। ಶ್ವಾಸಖಾಸವೆರಡು ಕಂಠದೇಶದಲ್ಲಿ ಸೇರಿದಾಗ। ವಾಸುದೇವನೆಂಬ ನಾಮ ಆ ಸಮಯಕ್ಕೊದಗದೋ।।3।। ಶೃಂಗಾರದ ದೇಹವೆಲ್ಲ ಅಂಗ ಮುರಿದು ಬೀಳುವಾಗ। ಕಂಗಳಿಗಾತ್ಮ ಸೇರಿದಾಗ ರಂಗನ ಧ್ಯಾನ ಒದಗದೋ।।4।। ವಾತಪಿತ್ತವೆರಡು ಕೂಡಿ ಈ ತನುವನಾವರಿಸಿ। ಧಾತು ಕುಂದಿದಾಗ ರಘುನಾಥನ ಧ್ಯಾನ ಒದಗದೋ।।5।। ಕಲ್ಲು ಮರನಾಗಿ ಜ್ಞಾನವಿಲ್ಲದಾಗ ಮರಣ ಒದಗೆ। ಫುಲ್ಲನಾಭ ಕೃಷ್ಣನೆಂಬ ಸೊಲ್ಲು ಬಾಯಿಗೊದಗದೋ।।6।। ಕೆಟ್ಟ ಜನ್ಮದಲ್ಲಿ ಹುಟ್ಟಿ ದುಷ್ಟ ಕರ್ಮಮಾಡಿ ದೇಹ। ಬಿಟ್ಟು ಹೋಗುವಾಗ ಪುರಂದರ ವಿಠಲನ ಧ್ಯಾನ ಒದಗದೋ।।7।।

ಶ್ರೀ ಮಹಾಲಕ್ಷ್ಮಿಯ ಅಲಂಕರಿಸಿ ರಾಗ: ಆರಭಿ

ಶ್ರೀ ಮಹಾಲಕ್ಷ್ಮಿಯ ಅಲಂಕರಿಸಿ ಕರೆದರು। ನಿಮ್ಮ ನಾಮವೆಂಬಂಥ ಚಿನ್ನದೊಡವೆಯಿಂದ।।ಪ।। ಕೇಶವ ನಿಮ್ಮ ನಾಮ ಕಂಠ ಮಾಂಗಲ್ಯ ಸೂತ್ರ। ನಾರಾಯಣ ನಿಮ್ಮ ನಾಮ ತಾಳಿ ಪದಕವು। ಮಾಧವ ನಿಮ್ಮ ನಾಮ ಸರಿಗೆ ಸಂಪಿಗೆ ಮೊಗ್ಗು। ಗೋವಿಂದ ನಿಮ್ಮ ನಾಮ ಗೋಧಿಯ ಸರವು।।1।। ವಿಷ್ಣುವೆ ನಿಮ್ಮ ನಾಮ ರತ್ನ ಕುಂಡಲಗಳು। ಮಧುಸೂಧನ ನಿಮ್ಮ ನಾಮ ಮಾಣಿಕ್ಯದ ಹರಳು। ತ್ರಿವಿಕ್ರಮ ನಿಮ್ಮ ನಾಮ ವಂಕಿ ನಾಗಮುರಿಗೆಯು। ವಾಮನ ನಿಮ್ಮ ನಾಮ ಒಲಿವ ಏಕಾವಳಿಯು।।2।। ಶ್ರೀಧರ ನಿಮ್ಮ ನಾಮ ಒಳ್ಳೆ ಮುತ್ತಿನ ಹಾರ। ಹೃಷಿಕೇಶ ನಿಮ್ಮ ನಾಮ ಕಾಲ ಗೆಜ್ಜೆಯು। ಪದ್ಮನಾಭ ನಿಮ್ಮ ನಾಮ ಮುತ್ತಿನ ಅಡ್ಡಿಕೆಯು। ದಾಮೋದರ ನಿಮ್ಮ ನಾಮ ರತ್ನದ ಪದಕವು।।3।। ಸಂಕರ್ಷಣ ನಿಮ್ಮ ನಾಮ ವಂಕಿ ತೋಳಬಂಧಿ। ವಾಸುದೇವ ನಿಮ್ಮ ನಾಮ ಚೂಡಾಮಣಿಯು। ಪ್ರದ್ಯುಮ್ನ ನಿಮ್ಮ ನಾಮ ಹಸ್ತ ಕಂಕಣ ಕಡಗ। ಅನಿರುದ್ಧ ನಿಮ್ಮ ನಾಮ ಮುಖುರ ಬುಲಾಕು।।4।। ಪುರುಷೋತ್ತಮ ನಿಮ್ಮ ನಾಮ ವಜ್ರದ ಮೂಗುತಿ। ಅಧೋಕ್ಷಜ ನಿಮ್ಮ ನಾಮ ಚಂದ್ರ ಸೂರ್ಯ। ನರಸಿಂಹ ನಿಮ್ಮ ನಾಮ ಚೌರಿ ರಾಗಟೆಗೊಂಡ್ಯ। ಅಚ್ಯುತ ನಿಮ್ಮ ನಾಮ ಮುತ್ತಿನ ಬೊಟ್ಟು।5।। ಜನಾರ್ಧನ ನಿಮ್ಮ ನಾಮ ಕಾಲುಂಗುರ ಪಿಲ್ಲಿಯು। ಉಪೇಂದ್ರ ನಿಮ್ಮ ನಾಮ ಗೆಜ್ಜೆರುಳಿಯು। ಶ್ರೀಹರಿ ನಿಮ್ಮ ನಾಮ ಬುಗುಡಿ ಚಳತುಂಬು। ಶ್ರೀ ಕೃಷ್ಣ ನಿಮ್ಮ ನಾಮ ನಡುವಿನ ವಡ್ಯಾಣವೂ।।6।। ಸರಸಿಜಾಕ್ಷಿ ನಿಮ್ಮ ಕದಪಿಗೆ ಅರಿಶಿನ ಎಣ್ಣೆಯ ಹಚ್ಚಿ। ಪಂಕಜಾಕ್ಷಿ ನಿಮಗೆ ಕುಂಕುಮ ಕಾಡಿಗೆ ನಿಟ್ಟು। ಪುರಂಧರವಿಠಲ ನಾಮ ಸರ್ವಾಭರಣದಿಂದಲಂಕರಿಸಿ। ನಿಲುವ ಕನ್ನಡಿಯನು ಲಲನೆಗೆ ತೋರಿಸುತ।।7।।

ಹರಿನಾಮದರಗಿಣಿಯು ಹಾರುತಿದೆ **ರಾಗ: ಕಲ್ಯಾಣ ವಸಂತ**

ಹರಿನಾಮದರಗಿಣಿಯು ಹಾರುತಿದೆ ಜಗದಿ। ಪರಮ ಭಾಗವತರು ಬಲೆಯ ಬೀಸುವರು।।ಪ।। ಕೋಪವೆಂಬ ಮಾರ್ಜಾಲ ಕಂಡರೆ ನುಂಗುವುದು। ತಾಪವೆಂಬುವ ಹುಲಿಯು ಕೊಂಡೊಯ್ಯುವುದು। ಕಾಪಾಡಲದನೊಯ್ದು ಹೃದಯದೊಳಗಿಂಬಿಟ್ಟು। ಆಪತ್ತಿಗೊದಗುವುದು ಆ ಮುದ್ದು ಅರಗಿಣಿಯು।।1।। ದಾರಿಯಲಿ ನಡೆವಾಗ ಚೋರರು ಪಟಳವಿಲ್ಲ। ಮೀರಿ ಬಂದರೆ ಅದನು ಹೊಡೆದು ನೂಕುವುದು। ಕ್ರೂರ ಯಮಭಟರನ್ನು ಮೂಗು ರೆಕ್ಕೆಲಿ ಬಡಿದು ದಾರಿ

ತೋರುವುದು ಮುರಾರಿ ಪಟ್ಟಣಕೆ॥2॥ ಎಷ್ಟು ವರ್ಣಿಸಲಿ ನಾ ಈ ಮುದ್ದು ಅರಗಿಣಿಯ। ಹೊಟ್ಟೆಯೊಳ ಗೀರೇಳು ಜಗವನಿಂಬಿಟ್ಟು। ಸೃಷ್ಟೀಶ ಪುರಂದರವಿಠ್ಠಲನ ನೆನೆನೆನೆದು। ಮುಟ್ಟಿ ಭಜಿಸುವುದು ನೀವೀ ಮುದ್ದು ಅರಗಿಣಿಯ॥3॥

ಹರಿಭಜನೆ ಮಾಡೋ ನಿರಂತರ **ರಾಗ:ಕಲ್ಯಾಣಿ, ಆದಿತಾಳ**

ಹರಿಭಜನೆ ಮಾಡೋ ನಿರಂತರ। ಪರಗತಿಗಿದು ನಿರ್ಧಾರ ನೋಡೋ॥ಪ॥ ಮೊದಲೇ ತೋರುತಿದೆ ಮಧುರ ವಿಷಯಸುಖ। ಕಡೆಯಲಿ ದುಃಖ ಅನೇಕ॥ಅ.ಪ॥ ವೇದಶಾಸ್ತ್ರಗಳ ಓದಿದರೇನೋ ಸಾಧನಕಿದು ನಿರ್ಧಾರ॥ ಸಾರವೋ ಬಹು ಸಂಸಾರ ವಿಮೋಚಕ ಸೇರೋ ಹಯವದನನ್ನ॥ಚ॥

ಹರಿಯ ನೆನೆಯದ ನರಜನ್ಮವೇಕೆ **ರಾಗ: ಷಣ್ಮುಖಪ್ರಿಯ**

ಹರಿಯ ನೆನೆಯದ ನರಜನ್ಮವೇಕೆ। ನರಹರಿಯ ಕೊಂಡಾಡದ ನಾಲಿಗೆಯೇಕೆ॥ಪ॥ ಸತ್ಯಶೌಚ ವಿಲ್ಲದಾಚಾರವೇಕೆ। ನಿತ್ಯ ನೇಮವಿಲ್ಲದ ಜಪತಪವೇಕೆ। ಭಕ್ತಿಲಿ ಮಾಡದ ಹರಿಪೂಜೆಯೇಕೆ। ಉತ್ತಮರಿಲ್ಲದ ಸಭೆಯು ತಾನೇಕೆ॥1॥ ವೇದವನೋದದ ವಿಪ್ರ ತಾನೇಕೆ। ಕಾದಲರಿಯದ ಕ್ಷತ್ರಿಯನೇಕೆ। ಕ್ರೋಧವ ಬಿಡದ ಸನ್ಯಾಸಿ ತಾನೇಕೆ। ಆದರವಿಲ್ಲದ ಅಮೃತಾನ್ನ ವೇಕೆ॥2॥ ಸಾಲದಿ ಹೂಳಿದ ಸಂಸಾರವೇಕೆ। ಬಾಲಕರಿಲ್ಲದ ಭಾಗ್ಯವಿದ್ದೇಕೆ। ವೇಳೆಗೆ ಒದಗದ ನಂಟರಿದ್ದೇಕೆ। ಅನುಕೂಲವಿಲ್ಲದ ಸತಿ ಸಂಗ ತಾನೇಕೆ॥3॥ ಮಾತಾಪಿತರ ಪೊರೆಯದ ಮಕ್ಕಳೇಕೆ। ಮಾತು ಕೇಳದ ಸೊಸೆಗೊಡವೆತಾನೇಕೆ। ನೀತಿನೇರಿಲ್ಲದ ಕೂಟ ತಾನೇಕೆ। ಅನಾಥನಾದ ಮೇಲೆ ಕೋಪವದೇಕೆ॥4॥ ಅಳಿಸಿ ಅಳಿದು ಪೋಪ ಮಕ್ಕಳಿದ್ದೇಕೆ। ತಿಳಿದು ಬುದ್ಧಿಯ ಪೇಳದ ಗುರುವೇಕೆ। ನಳಿನನಾಭ ನಮ್ಮ ಪುರಂದರವಿಠಲನ। ಚೆಲುವಮೂರ್ತಿಯ ನೋಡದ ಕಂಗಳೇಕೆ॥5॥

ಹರಿಸ್ಮರಣೆ ಮಾಡೊ ನಿರಂತರ **ರಾಗ: ಯಮುನಕಲ್ಯಾಣಿ, ಏಕತಾಳ**

ಹರಿಸ್ಮರಣೆ ಮಾಡೊ ನಿರಂತರ॥ಪ॥ ಪರಗತಿಗೆ ಇದು ನಿಧಾನ॥ಅ.ಪ.॥ ದುರಿತಗಜಕ್ಕೆ ಕಂಠೀರವನೆನಿಸಿದ। ಶರಣಾಗತ ರಕ್ಷಕ ಪಾವನ ನೀ॥1॥ ಸ್ಮರಣೆಗೈದ ಪ್ರಹ್ಲಾದನ ರಕ್ಷಿಸಿದ। ದುರುಳ ಹಿರಣ್ಯಕನುದರವ ಸೀಳಿದ॥2॥ ತರುಣಿ ದ್ರೌಪದಿ ಮೊರೆಯಿಡಲಾಕ್ಷಣ। ಭರದಿಂದಕ್ಷಯವಿತ್ತ ಮಹಾತ್ಮನ॥3॥ ಅಂದು ಅಜಾಮಿಳ ಕಂದನ ಕರೆಯಲು। ಬಂದು ಸಲಹಿ ಆನಂದವ ತೋರಿದ॥4॥ ಶ್ರೀಶ ಪುರಂದರವಿಠ್ಠಲರಾಯನ। ಸೃಷ್ಟಿಗೊಡೆಯನ ಮುಟ್ಟಿ ಭಜಿಸಿ ನೀ॥5॥

ಹುಚ್ಚು ಹಿಡಿಯಿತು ಎನಗೆ **ರಾಗ: ಪೂರ್ವಿಕಲ್ಯಾಣಿ, ಆದಿತಾಳ**

ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು॥ಪ॥ ಅಚ್ಯುತನ ನಾಮವೆಂಬ ಮೆಚ್ಚುಮದ್ದು ತಲೆಗೆ ಏರಿ॥ಅ.ಪ॥ ವಾಸುದೇವನೆಂಬ ನಾಮ ವದನದಲಿ ಒದರುವೆ। ಮಾಯಾಪಾಶವೆಂಬ ಅಂಗಿಯನ್ನು ಹರಿದು ಹರಿದು ಬಿಸುಡುವೆ। ಕ್ಲೇಶವೆಂಬ ಮುಡಿದ ಹೂವ ಕಿತ್ತು ಕಿತ್ತು ಬಿಸುಡುವೆ। ಅನ್ಯ ದೋಷವೆಂಬ ಗೋಡೆಯನ್ನು ಕೆರೆದು ಕೆರೆದು ಹಾಕುವಂಥ ॥1॥ ಕೃಷ್ಣನಂಘ್ರಿ ಕಮಲಕೆರಗಿ ಜರಿದು ಜರಿದು ಬೀಳುವೆ। ಎನ್ನ ಕಷ್ಟವೆಂಬ ಕುಂಭವನ್ನು ಒಡೆದು ಒಡೆದು ಹಾಕುವೆ। ನಿಷ್ಠರನ್ನು ಕಂಡರವರ ಹಿಂದೆ ಹಿಂದೆ ತಿರುಗುವೆ। ಸಲೆ ದುಷ್ಟರನ್ನು ಕಂಡಕಡೆ ಕಲ್ಲು ಕಲ್ಲು ಬೀಸುವಂಥ॥2॥ ಮಂದ ಮತಿಗಳನ್ನು ಕಂಡರೆ ಮೂಕನಾಗುವೆನು। ಹರಿಯ ನಿಂದೆ ಮಾಡುವವರ ಮೇಲೆ ಮಣ್ಣು ತಂದು ಚೆಲ್ಲುವೆ। ತಂದೆ ಸಿರಿಪುರಂದರವಿಠಲನ್ನ ಪಾದವನ್ನು। ಹೊಂದಿಸುವ ಜನರ ಸೇರಿ ಹಾಡಿ ಪಾಡಿ ಕುಣಿಯುವಂಥ॥3॥

ಭಕ್ತಿಗೀತೆ

ಇದೇ ರಾಮನಾಮ ಪರಮ ರಾಮ ನಾಮ **ರಾಗ: ಶುದ್ಧಧನ್ಯಾಸಿ, ಆದಿತಾಳ**

ಇದೇ ರಾಮನಾಮ ಪರಮ ರಾಮ ನಾಮ ಪರಮಾತ್ಮ ಧ್ಯಾನ ಈ ನಾಮ॥ಪ॥ ಶಿಲೆಯ ಮೆಟ್ಟಿ ವನಿತೆಯಗೈದ ಶಿವಧನುವ ಮುರಿದನು ರಾಮ। ಶಿವಭಕ್ತ ರಾವಣನನ್ನು ಸಂಹರಿಸಿ ಮೆರೆದನು ರಾಮ। ಹರಿಯು ಹರನು ಒಂದೇ ಎಂದು ಸಾರಿ ಸಾರಿ ಜಪಿಸಿದ ನಾಮ॥1॥ ಚಂದ್ರಸೇನ ನಂಬಿದ ನಾಮ ಜಾಂಬವಂತ ಜಪಿಸಿದ ನಾಮ। ಸುಗ್ರೀವ ಸಾರಿದ ನಾಮ ತಾಯಿ ಶಬರಿ ಹೇಳುವ ನಾಮ। ಜನ್ಮ ಜನ್ಮದ ಪುಣ್ಯದ ಫಲವೋ ರಾಮನಾಮದ ಪೂಜಾಫಲವೋ॥2॥ ಸೂರ್ಯನಂತೆ ಹೊಳೆಯುವ ನಾಮ। ಚಂದ್ರನಂತೆ ಬೆಳಗುವ ನಾಮ। ದಶರಥನ ಪುತ್ರನಾದ ಈ ನಮ್ಮ ಸೀತಾ ರಾಮ ಜನನ ಮರಣ ಕಳೆಯುವ ನಾಮ। ಎಂದೂ ಯಾರೂ ಮರೆಯದ ನಾಮ॥3॥ ಮನದಿ ನೆನೆದ ಮಾತುಗಳೆಲ್ಲಾ ಮಧುರವಾದ ರಾಮನಾಮ। ಸವಿಯಾದ ಜೀವನವೆಲ್ಲಾ ಪ್ರಿಯವಾದ ರಾಮನಾಮ। ಭಕ್ತರನ್ನು ರಕ್ಷಿಪ ನಾಮ। ಇದೇ ಮಹಾನಾಮ ಪರಮ ರಾಮನಾಮ॥4॥

ಕಪಿಕುಲೇಶ ಹನುಮನದೇವ ರಾಮಚಂದ್ರನ **ರಾಗ:ಶುಭಪಂತುವರಾಳಿ**

ಕಪಿಕುಲೇಶ ಹನುಮನದೇವ ರಾಮಚಂದ್ರನ। ವಿಪುಲ ನಾಮವನ್ನು ಬಿಡದೆ ಜಪಿಸೊ ಮಾನವ ॥ಪ॥ ಬಾಲ್ಯದಲ್ಲಿ ಕೌಶಿಕ ಋಷಿಯ ವ್ರತವ ಸಲುಹಿದ। ಫಾಲನೇತ್ರ ಶಿವನ ಧನುವ ಮುರಿದು ಕೆಡಹಿದ। ಶೂರತನದಿ ಸೀತೆಯನ್ನು ಮದುವೆಯಾಗುತಾ। ಧೀರ ಪರಶುರಾಮನನ್ನು ಭಂಗಪಡಿಸಿದ॥1॥ ಪಿತನ ನೇಮದಿ ವನಕೆ ಹಿತದೆ ತೆರಳಿದ। ಸತತ ದುಷ್ಟರ ಧನುಜರನ್ನು ಬಿಡದೆ ಸೀಳಿದ। ಸೂರ್ಯ ಸುತಗೆ ಪಟ್ಟಕಟ್ಟಿ ಪರಮನೆನಿಸಿದ। ಮಾರುತಿಯಿಂದ ಮುದ್ರೆ ಕಳುಹಿ ತನ್ನ ವಾರ್ತೆ ತಿಳಿಸಿದ॥2॥ ಶರಧಿ ಗಿರಿಗೆ ಸೇತುವೆಯ ಭರದಿ ಕಟ್ಟಿದ। ದುರುಳ ರಾವಣನ್ನ ಕೊಂದು ಧರೆಯ ಸಲಹಿದ। ರಾಮ ಸೀತಾ ರಾಮ ರಘುರಾಮ ನಂದನ। ವಿಪುಲ ನಾಮವನ್ನು ಬಿಡದೆ ಜಪಿಸೊ ಮಾನವ॥3॥ ತರುಣಿಯೊಡನೆ ಕೂಡಿ ತನ್ನ ಪುರಕೆ ತೆರಳಿದ। ಭರತನನ್ನು ಪೊರೆದ ಬಳಿಕ ರಾಜ್ಯವಾಳಿದ। ಪರಮ ವೈಭವದಿಂದ ಸಿಂಹ ಪೀಠವೇರಿದಾ। ಪುರದಿ ಜನರ ಬಿಡದೆ ಕಾಯ್ವ ಪರಮ ಪುರುಷನು॥4॥

ಕರದಲಿ ತಾಳ ಸಂತರ ಮೇಳ

ಕರದಲಿ ತಾಳ ಸಂತರ ಮೇಳ। ಅಲ್ಲಿರುವವನು ಹರಿ ಗೋಪಾಲ॥ ಇಲ್ಲಿರುವವನು ಹರಿ ಗೋಪಾಲ। ಎಲ್ಲೆಲ್ಲಿರುವವನು ಹರಿ ಗೋಪಾಲ॥1॥ ಪರಿಪರಿ ಸ್ತುತಿಸುವಪರಮ ಭಕ್ತರನು। ಪರಿಪಾಲಿಪ ಪುರಂದರ ವಿಠ್ಠಲ। ಗೆಜ್ಜೆಯ ಕಟ್ಟು ಲಜ್ಜೆಯ ಬಿಟ್ಟು। ಸಜ್ಜನ ಸೇವೆಯೊಳ್ ಮನಸ್ಸಿಟ್ಟು॥2॥ ಹೆಜ್ಜೆ ಹೆಜ್ಜೆಗೂ ಹರಿ ನಾಮವನು। ಗರ್ಜಿಸಿ ಹೇಳುವ ಕರತಟ್ಟು। ನಾಮವೆ ಧ್ಯಾನ ನಾಮವೆ ಪಾವನ। ನಾಮ ಸಂಕೀರ್ತನ ಜೀವನ॥3॥ ನಾಮವೆ ಧನ ಹರಿನಾಮವೆ ರಕ್ಷಣ। ನಾಮವೆ ಮೋಕ್ಷ ಸಾಧನ। ಬಾಲ ಯೌವನ ವೃದ್ಧಾಪ್ಯದೊಳು॥4॥ ಹೋಳು ಹೊತ್ತು ಆಯುಷ್ಯವೆಲ್ಲ। ಮೂಲನಾರಾಯಣನಾಲಯ ಸೇರಲು। ನಾಮ ಹೊರತು ಗತಿಬೇರಿಲ್ಲ॥5॥

ಪರಮ ಮಂಗಳ ಮೋಕ್ಷದಾಯಕ **ರಾಗ: ಮೋಹನ**

ಪರಮ ಮಂಗಳ ಮೋಕ್ಷದಾಯಕ ಸೀತಾರಮಣ ಹರೆ॥ಪ॥ ಬಾರೊ ಶ್ರೀ ರಾಮ ಬಾರೋ ರಘುರಾಮ। ನಿನ್ನ ನಾಮದ ಬಲವು ಮಹಾದರ್ಶನವು ಬೇಕು ನಮಗೆ ಎಂದೆಂದು॥ಅ.ಪ.॥ ನಗುತ ನಲಿದು ಬಾಬಾ। ದೇವ ಒಲಿದು ಕುಣಿದು ಬಾಬಾ। ನಗುತ ನಗುತಲಿ ನಮ್ಮೆಲ್ಲರನು ಕಾಯ್ವ ತಂದೆ ಬಾಬಾ॥1॥ ಸುಂದರ ವದನನೆ ಅಂದ ಚೆಂದ ಚೆಲುವನೆ। ಮುಂದೆ ನಡೆಸು ಎಂದೆಂದು। ನಮ್ಮನು ಅನಂತ ಮಹಿಮ ಜಗದೋದ್ಧಾರನೆ॥2॥ ಬಾಳಜ್ಯೋತಿ ನೀನೆ ಬಾಳಿನ ಭವ್ಯ ಭಾಗ್ಯ ನೀನೆ। ಸತ್ಯ ಸ್ವರೂಪ ಸಕಲ ಪಾಪಹರ। ಸದಾನಂದ ಸುಗುಣಾಂತರಂಗ ನೀನೆ॥3॥

ಪಿಬರೇ ರಾಮರಸಂ ರಸನೇ **ರಾಗ: ಚಕ್ರವಾಕ, ಆದಿತಾಳ**

ಪಿಬರೇ ರಾಮರಸಂ ರಸನೇ॥ಪ॥ ದೂರೀಕೃತ ಪಾತಕ ಸಂಸರ್ಗಂ ಪೂರಿತ ನಾನಾವಿಧ ಫಲವರ್ಗಂ॥1॥ ಪಾರಿಪಾಲಿತ ಸರಿಸಿಜ ಗರ್ಭಾಂಡಂ ಪರಮ ಪವಿತ್ರೀಕೃತ ಪಾಷಂಡಂ॥2॥ ಜನನ ಮರಣ ಭಯ ಶೋಕವಿದೂರಂ ಸಕಲ ಶಾಸ್ತ್ರನಿಗಮಾಗಮ ಸಾರಂ॥3॥ ಶುದ್ಧ ಪರಮಹಂಸಾಶ್ರಮ ಗೀತಂ ಶುಕ ಶೌನಕ ಕೌಶಿಕ ಮುಖ ಪೀತಂ॥4॥ ಪರಮಹಂಸ ವಚನಾಮೃತ ಸಾರಂ। ಬ್ರಹ್ಮಾನಂದ ಗುಣಾಧಿಕ ಸಾರಂ॥5॥

ಬ್ರೂಹಿ ಮುಕುಂದೇತಿ ರಸನೇ **ರಾಗ: ಕುರಂಜಿ, ಆದಿತಾಳ**

ಬ್ರೂಹಿ ಮುಕುಂದೇತಿ ರಸನೇ॥ಪ॥ ಕೇಶವ ಮಾಧವ ಗೋವಿಂದೇತಿ। ಕೃಷ್ಣಾನಂದ ಸದಾನಂದೇತಿ॥1॥ ರಾಧಾರಮಣ ಹರೇ ರಾಮೇತಿ। ರಾಜೀವಾಕ್ಷ ಘನಶ್ಯಾಮೇತಿ॥2॥ ಗರುಡಗಮನ ನಂದಕ ಹಸ್ತೇತಿ। ಖಂಡಿತ ದಶಕಂದರ ಮಸ್ತೇತಿ॥3॥ ಅಕ್ರೂರಪ್ರಿಯ ಚಕ್ರಧರೇತಿ। ಹಂಸ ನಿರಂಜನ ಕಂಸಹರೇತಿ॥4॥

ಭೀತ್‌ಗಯೆ ದಿನ್ ಭಜನ್ ಬಿನಾರೇ **ರಾಗ: ಭೂಪಾಳಿ**

ಭೀತ್‌ಗಯೆ ದಿನ್ ಭಜನ್ ಬಿನಾರೇ॥ಪ॥ ಬಾಲ ಅವಸ್ಥಾಖೇಲ ಗವಾಯೋ। ಜಬ್ ಜೋ ಬನ್ ತಬ್ ಮಾನ ಧನಾರೆ॥1॥ ಲಾಹೇ ಕಾರನ ಮೂಲ್ ಗವಾಯೋ। ಅಜಹು ನ ಗಯೀ ಮನಕೀ ತೃಸನಾ ರೇ॥2॥ ಕಹತ ಕಬೀರ ಸುನೋ ಭಾಯೀ ಸಾಧೋ। ಪಾರ್ ಉತರ ಗಯೇ ಸಂತ ಜನಾರೇ॥3॥

ಮಾದೇಶನೆಂದೊಮ್ಮೆ ನುಡಿಯಬಾರದೆ **ರಾಗ: ರಾಗಮಾಲಿಕೆ, ಆದಿತಾಳ**

ಮಾದೇಶನೆಂದೊಮ್ಮೆ ನುಡಿಯಬಾರದೆ ನಾಲಿಗೆ। ಆಡಬಾರದ ಮಾತನಾಡುವ ದುಷ್ಟನಾಲಿಗೆ॥ ತಿನ್ನಬಾರದುದನ್ನೆಲ್ಲ ತಿಂಬ ನೀಚನಾಲಿಗೆ॥ಪ॥ ಮದನಾದಿ ಮಾದೇಶನ ಅಮರ ನಾಮವ ನುಡಿಯೋ ನಾಲಿಗೆ। ನೀ ಪರಿಶುದ್ಧಿ ಹೊಂದುವ ನಾಲಿಗೆ। ಕೀಳ್ನುಡಿಗಳು ನಿನ್ನ ಬಳಿ ಸೇರಲಂಜುವುವು ನಾಲಿಗೆ। ದಿವ್ಯವಾಣಿಯ ಬುಗ್ಗೆ ನೀನಾಗುವೆ ನಾಲಿಗೆ॥1॥ ಮಾದೇಶ ಮಾದೇಶ ಎನ್ನ ನನವರತ ನೀ ನುಡಿಯುತಿರೆ ನಾಲಿಗೆ। ಘನತೆ ಗೌರವ ಬರಿಸುವೆ ನನ್ನವರಿಗೆ ನಾಲಿಗೆ। ಸುಖ ಸಂಪದಗಳಿಗವನ ಒಡೆಯನ ಮಾಡುವೆ ನಾಲಿಗೆ। ಭವಸಾಗರವ ದಾಟಿ ಸುತ್ತಮುತ್ತ ದಡಕೊಯ್ಯುವ ನಾಲಿಗೆ॥2॥

ರಾಮನಾಮಂ ಒರು ಮರುಂದು (ತಮಿಳು) **ರಾಗ:ಹಿಂದುಸ್ಥಾನಿಕಾಪಿ**

ರಾಮನಾಮಂ ಒರು ಮರುಂದು। ರಾಮನಾಮಂ ಅರು ಮರುಂದು॥ಪ॥ ಒರೇ ಒರುಮರುಂದು ಒರು ಮರುಂದು ಉಲಗತ್ತೈ ಉಯಿರ್‌ವಿಕ್ಕ ವಂದ ಮರುಂದು॥ಅ.ಪ.॥ ಸೊಲ್ಲಿನ್ ಸೆಲ್ವನ್ ಆಂಜನೇಯನ್ ತಿನ್ನುಂ ಮರುಂದು। ಸೊಲ್ಲ ಸೊಲ್ಲ ತಿತ್ತಿಕ್ಕುಂ ಅಂದ ಮರುಂದು॥ ಅಂಜನಾ ವಾಕ್ಯಂ ಎನ್ನುಂ ಮರುಂದು॥ಆರವ ಮುಡನ್ ಅಸೈಪೋಟ್ಟು ತಿನ್ನ ಮರುಂದು॥1॥ ತಾರಕ ಮಂತ್ರಂ ಅಂದ ಮರುಂದು। ತಾಪಂ ಮೂನ್ರುಂ ಪೋಕ್ಕವಂದ ಮರುಂದು॥ ತಿನ್ನ ತಿನ್ನ ತಿಗಟ್ಟಾದ ಅಂದ ಮರುಂದು। ದೇವರ್ಗಳುಕ್ಕುಂ ಕಿಟ್ಟಾದ ಅಂದ ಮರುಂದು॥2॥ ಜಾನಕಿಕ್ಕುಂ ಜೀವನ್ ತಂದ ಅಂದ ಮರುಂದು। ಜಾತಿ ಮಂದಂ ಭೇದಮಿನ್ರು ಸೊಲ್ಲುಂ ಮರುಂದು॥ಮಾರುತಿಕ್ಕಿ ಪೆರುಮೈ ತಂದ ಅಂದ ಮರುಂದು। ಮಾದೇವನ್ ಆಡಿಪಾಡಿ ಪೇಸುಂ ಮರುಂದು॥3॥ ಮಂಗಾದ ಸೆಲ್ವಂ ತರುಂ ಅಂದ ಮರುಂದು। ಮಾಯವ ಪಿರಪಿರ್ಕುಂ ಅಂದ ಮರುಂದು॥ ಪಾಮರರುಕ್ಕುಂ ಪಂಡಿತರುಕ್ಕುಂ ಅಂದ ಮರುಂದು॥ಪಾರಪಕ್ಷಂಮಿನ್ರು ಫಲಂ ತರುಂ ಅಂದ ಮರುಂದು॥4॥ ತುರವಿಗಳುಂ ಯೋಗಿಗಳುಂ ತಿನ್ನುಂ ಮರುಂದು। ತುಳಸೀದಾಸನ್ ತೇಡಿ ತೇಡಿ ಕಂಡ ಮರುಂದು। ಐದುಂ ಎಟ್ಟುಂ ಷಡ್ಜಂ ಸೇಂರ್‌ದದು ಅಂದ ಮರುಂದು। ಐಂದು ವಿಧ ಪಾವಂಗಳೈ ಪೋಕ್ಕುಂ ಮರುಂದು॥5॥ ವೈದೇಹಿಕ್ಕುಂ ವಾಳ್ವ್ ಅಲಿತ್ತ ಅಂದ ಮರುಂದು। ಇಲ್ಲತ್ತಿಲ್ ವಾಳ್ವಳಿತ್ತ ಅಂದ ಮರುಂದು।

ಇರುದಿಯಿಲೆ ವಿಟ್ಟುತರುಂ ಅಂದ ಮರುಂದು॥ ಫಲವಿಧ ಒಳಿಮೈಗಳ್ಳೈ ತಂದ ಮರುಂದು॥6॥ ಭಕ್ತರ್ಗಳ್ಳೈ ಪಾಡಿ ಆಡವೈತ್ತ ಅಂದ ಮರುಂದು। ಫಲವಿಧ ಭಯಂಗಳ್ಳೈ ಪೋಕ್ಕುಂ ಅಂದ ಮರುಂದು॥ ಕೇಕ್ಕ ಕೇಕ್ಕ ತಿಗಟ್ಟಾದ ರಾಮನಾಮ ಮರುಂದು। ಎಂಗೂ ಒಳಿತರುಂ ಅಂದ ಮರುಂದು॥7॥

ರಾಮ2 ಸೀತಾರಾಮ **ರಾಗ: ದರ್ಬಾರ್**

ರಾಮ ರಾಮ ಸೀತಾ ರಾಮ ರಾಮ ಅನ್ನಿರೊ। ರಾಮ ಸ್ಮರಣೆಯ ಹೊತ್ತು ಕಾಲ ವ್ಯರ್ಥಕಳೆಯಬೇಡಿರೊ॥ಪ॥ ಸ್ನಾನ ಸಂಧ್ಯಾ ನಿತ್ಯ ನೇಮ ಜಪವ ತಪವನು ಮಾಡಿರೋ। ಸಾಯೋ ಸಂಕಟ ಬಂದರೂ ಪರಧನ ಹಿಡಿಯಬೇಡಿರೊ॥1॥ ತಂದೆ ತಾಯಿ ಬಂಧು ಬಳಗ ಮಿಥ್ಯವೆಂದೂ ತಿಳಿಯಿರೊ। ನನದು ನಾನೆಂಬ ಮೋಹವ ಬಿಟ್ಟು। ರಾಮನ ಭಜಿಸಿರೊ॥2॥ ಕಾಮ ಕ್ರೋಧ ಮೋಹ ಬಿಟ್ಟು ಮನಸ್ಸು ಝುಳಝುಳ ಮಾಡಿರೊ। ಕಾಯ ವಾಚ ಮನಸ್ಸಿನಿಂದ ಗುರುವಿಗೆ ಶರಣು ಹೋಗಿರೋ॥3॥ ಪರರ ದ್ರವ್ಯ ಪರರ ನಾರಿ ನರಕವೆಂದು ತಿಳಿಯಿರೊ। ಚಿಂತಿ ಇಲ್ಲದ ರಾಮನ ಚಿಂತಿಸಿ ಜನನ ಮರಣ ಕಳೆಯಿರೊ॥4॥ ಭಕ್ತಿ ಭಾವದಿಂದ ಸದ್ಗುರು ಹರಿಯು ಹರನೆಂದರಿಯಿರೋ। ಗುರುವಿನಪ್ಪಣೆಯಂತೆ ನಡೆದರೆ ಮುಕ್ತಿಯೆಂದು ತಿಳಿಯಿರೋ॥5॥ ದಿವಸ ರಾತ್ರೆ ಸಾಧು ಸಂತರ ಸಂಘವನ್ನೇ ಬಯಸಿರೊ। ಬ್ರಹ್ಮಾನಂದ ಸಾರಿ ಹೇಳಿದ ರಾಮ ನಾಮವ ಜಪಿಸಿರೋ॥6॥ ರಾಮ ರಾಮ॥

ಶ್ರೀರಾಮನೇ ನಿನ್ನ ನಾಮವ

ಶ್ರೀರಾಮನೇ ನಿನ್ನ ನಾಮವ ಭಜಿಸುವೆನು। ದೀನಜನೋದ್ಧಾರ। ದಾನವ ಸಂಹಾರ॥ಪ॥ ಪರಿಪರಿಯ ವಿಧದಿಂದ। ಸ್ಮರಿಸುವೆ ನಾ ನಿಮ್ಮ। ಧೃಡಭಕುತಿಯನು ಎನಗೆ। ಕೊಡು ನೀ ಸೀತಾಕಾಂತ॥1॥ ಶ್ರೀಮಾರುತೀ ತಾತ। ಶ್ರೀ ಜಾನಕೀ ಪ್ರೀತ। ಭಜಿಸುವೆನು ಪ್ರಖ್ಯಾತ ಸುಜನ ಮನವಿಖ್ಯಾತ॥2॥ ಪ್ರತಿದಿನವೂಗೈವಂತ। ಶತಪಾಪವನೇ ಕಳೆದು। ಹಿತದಿಂದ ದಯತೋರು। ಸುತಳಂತೆ ಕಾಪಾಡು॥3॥

ಭಜನೆ

ಭಜನೆಗೆ ಪ್ರಾರಂಭ ಮಾಡೋಣ **ರಾಗ: ಶ್ರೀ**

ಭಜನೆಗೆ ಪ್ರಾರಂಭ ಮಾಡೋಣ। ಆಗಲಿ ಮೊದಲು ರಾಮಸ್ಮರಣೆ॥ಪ॥ ರಾಮ ಭಜನೆಗೆ ನಿಂತಾಗ ಮಾಡಬೇಕು ಲಜ್ಜಾತ್ಯಾಗ। ಲಕ್ಷ್ಯ ಬೇಡ ರಾಗದ ಕಡೆಗೆ ಪ್ರೇಮ ತುಂಬಲಿ ಹೃದಯದೊಳಗೆ॥1॥ ರಾಗ ತಾಳ ಹೇಗೇ ಇರಲಿ ರಾಮನಾಮ ಬಾಯಿಗೆ ಬರಲಿ। ರಾಮನಾಮದ ರುಚಿಯು ಬಹಳ ಭಾಗವತ ಮರುಳಾ॥2॥

ಶ್ರೀ ರಾಮ ರಘು ರಾಮ (ತ್ಯಾಗರಾಜ ರಾಮ ನಾಮಾಮೃತಂ)

ಶ್ರೀ ರಾಮ ರಘು ರಾಮ। ಶೃಂಗಾರರಾಮ। ವಾರಿಜೇಕ್ಷಣರಾಮ। ವೈಕುಂಠರಾಮ। ವಿಶ್ವಕಾರಣ ರಾಮ। ವಿಶ್ವೇಶ ರಾಮ। ಶಾಶ್ವತ ಗುಣರಾಮ ಸೌಂದರ್ಯ ರಾಮ॥1॥ ಶೌರ್ಯ ಸಾಹಸ ರಾಮ। ಸಾಕೇತ ರಾಮ। ಧೈರ್ಯವಿಕ್ರಮ ರಾಮ। ದಶರಥ ರಾಮ। ಭುಜಪರಾಕ್ರಮ ರಾಮ। ಭುವನೈಕ ರಾಮ। ಸುಜನಪೋಷಣ ರಾಮ। ಶುಭನಿಧಿರಾಮ॥ 2 ॥ ಕಪಟನಾಟಕ ರಾಮ। ಕೌಸಲ್ಯ ರಾಮ। ಚಪಲ ದೈತ್ಯವಿರಾಮ। ಜಗದೇಕ ರಾಮ। ಪುಣ್ಯವಿಗ್ರಹ ರಾಮ। ಭೂಪತಿ ರಾಮ। ಪುಣ್ಯಜನವಿರಾಮ। ಬುಧನುತ ರಾಮ॥ 3 ॥ ಚಾರುಭುಜಬಲರಾಮ। ಧರಣೀಶರಾಮ। ಪಾವನಾತ್ಮಕ ರಾಮ। ಅಖಿಲೇಶರಾಮ। ಕಮಲಜಪತಿ ರಾಮ। ಕಲ್ಯಾಣ ರಾಮ। ಕಮಲಾಪ್ತಕುಲರಾಮ। ಗಾಂಭೀರ್ಯ ರಾಮ ॥4॥ ಸಾಕೇತಪುರ ರಾಮ। ಸತ್ಯಾತ್ಮ ರಾಮ। ರಾಕೇಂದು ಮುಖರಾಮ। ರಣವಿಜಯರಾಮ। ಪರಮಪಾವನ ರಾಮ। ಪಟ್ಟಾಭಿರಾಮ। ಭರತಾಗ್ರಜ ರಾಮ। ಭವ್ಯಾಂಗ ರಾಮ॥ 5 ॥ ವನವಿಹಾರಣ ರಾಮ। ವರನೀಲ ರಾಮ। ಮುನಿಜನ

ಸ್ತುತರಾಮ। ಮುಖ್ಯಾತ್ಮ ರಾಮ। ತಾಪಸೋತ್ತಮ ರಾಮ। ಶಾಪಹರಣ ರಾಮ। ಪಾಪಸಂಹರ ರಾಮ। ಭಾಸುರ ರಾಮ।। 6 ।। ರಘುಕುಲೋತ್ತಮ ರಾಮ। ರಘುವೀರ ರಾಮ। ಅಘವಿನಾಶನ ರಾಮ। ಅಚ್ಯುತ ರಾಮ। ನಿರುಪ ಮೋನ್ನಕ ರಾಮ। ನಿರ್ಮಲ ರಾಮ। ಸುರಗುಣವರ ರಾಮ। ಸುಗುಣಾಭಿ ರಾಮ।। 7 ।। ಮಾರೀಚಹರ ರಾಮ। ಮಹನೀಯ ರಾಮ। ಕ್ರೂರಭಂಜನ ರಾಮ। ಗುರುಭುಜ ರಾಮ। ಶಬರಿರಕ್ಷಣ ರಾಮ। ಶಾಂತಾತ್ಮ ರಾಮ। ಶುಭಲಕ್ಷಣ ರಾಮ। ಸುಂದರ ರಾಮ।। 8 ।। ಪವನಜಹಿತ ರಾಮ। ಭಾಷಿತ ರಾಮ ರವಿಜಪೋಷಣ ರಾಮ। ದೈತ್ಯಾರಿ ರಾಮ। ವಾಲಿನಿಗ್ರಹ ರಾಮ। ಪರಶೌರ್ಯ ರಾಮ। ಶೈಲ ಚಾರಣ ರಾಮ। ಜನನುತ ರಾಮ।। 9 ।। ಕಲಿವಿನಾಶನ ರಾಮ। ಕಾರುಣ್ಯ ರಾಮ। ಜಲಧಿಬಂಧನ ರಾಮ। ಜಯವಿಜಯ ರಾಮ। ಪ್ರತಿಕೃತಶ್ರಿತ ರಾಮ। ಭವನಾಶ ರಾಮ। ಕ್ಷಿತಿಜನಪ್ರಭು ರಾಮ। ಚಿನ್ಮಯ ರಾಮ।।10।। ಆರೂಢ ಜಯರಾಮ। ಅಯೋಧ್ಯ ರಾಮ। ಚಾರುಭೂಷಣ ರಾಮ। ಜಯಜಯ ರಾಮ। ಮಾಯಾರಹಿತ ರಾಮ। ಮಧುವೈರಿ ರಾಮ। ಸಾಯುಜ್ಯ ಪತಿರಾಮ। ಸಂಪೂರ್ಣ ರಾಮ।।11।। ಯಾಗರಕ್ಷಣ ರಾಮ। ಅಭಿನವ ರಾಮ। ಆಗಮಸ್ತುತರಾಮ। ಆತ್ರೇಶ ರಾಮ। ಹರಚಾಪಹರ ರಾಮ। ಆನಂದ ರಾಮ। ಶರಧನುರ್ಧರ ರಾಮ। ಜಾನಕಿ ರಾಮ।।12।। ದೀನ ಪಾಲನ ರಾಮ। ದಿವ್ಯಾತ್ಮ ರಾಮ। ಸೂನಾಸ್ತಪತಿ ರಾಮ। ಸುರವಂದ್ಯ ರಾಮ। ಸತ್ಯಾತ್ಮಕ ರಾಮ। ಸರ್ವೇಶ ರಾಮ। ಸರ್ವದೋಷ ವಿರಾಮ। ಸರ್ವಾತ್ಮ ರಾಮ।।13।। ಕುಶಲವಪಿತ ರಾಮ। ಕೋದಂಡರಾಮ। ವಿಷದವಕ್ತ್ರೋ ರಾಮ। ವೇದಾಂತ ರಾಮ। ಜಗತ ಪಾಲಕ ರಾಮ। ಸೌಮಿತ್ರಿ ಪ್ರಿಯ ರಾಮ। ನಿಗಮಗೋಚರ ರಾಮ। ನಿತ್ಯಾತ್ಮ ರಾಮ।।14।। ಸತತಂಬುನುತಿಯಿಂತು ಸದ್ಗುಣ ರಾಮ। ಇತರಂಬು ನೇನೆರಗು। ಪರಿಪೂರ್ಣ ರಾಮ। ತಲ್ಲಿತಂಡ್ರಿಯು ಗುರುವು। ದೇವಂಬುನೀವೇ। ಎಲ್ಲ ಬಾಂಧವ ಜಾಲ। ಮಿಲಿ ನೋವನೀವ ।।15।। ನಿನ್ನುನಮ್ಮಿತಿ ರಾಮ। ನಿಖಿಲೇಶ ರಾಮ। ನನ್ನುರಕ್ಷಿಂಪವೇ। ಸೀತಾಭಿರಾಮ। ಪರಮಪಾವನ ರಾಮ। ಪರಮಾತ್ಮ ರಾಮ। ಸಿರುಲಿಚ್ಚಿರಕ್ಷಿಂಚು। ಭದ್ರಾದ್ರಿ ರಾಮ।।16।।

ಸದಾ ಎನ್ನ ನಾಲಿಗೆಯಲಿ — **ರಾಗ: ಸಿಂಧುಭೈರವಿ**

ಸದಾ ಎನ್ನ ನಾಲಿಗೆಯಲಿ ಬರಲಿ ರಾಮ ನಾಮ।।ಪ।। ಬರಲಿ ರಾಮ ನಾಮ ಸದಾ ಬರಲಿ ಕೃಷ್ಣ ನಾಮ। ಸತತ ನಿನ್ನ ಚರಣ ಸೇವೆ ನೀಡು ಎನಗೆ ರಾಮ ।।1।। ನಿನ್ನ ನಾಮ ನೆನೆವುದಕೆ ನೀಡು ಎನಗೆ ಸುಮನವ। ನಾನಿನ್ನ ನಂಬಿದೆನು ಶ್ರೀ ರಾಮಚಂದ್ರದೇವ ।।2।। ಕಂದ ಪ್ರಹ್ಲಾದ ಪಿತನಿಂದ ನೊಂದು ಕರೆಯಲು। ಕಂಬದಿಂದ ಒಡೆದು ಸಾಮ್ರಾಜ್ಯ ಪದವಿ ಕೊಟ್ಟನೊ।।3।। ದುರುಳ ದುಶ್ಯಾಸನನು ಸಭೆಯ ಮಧ್ಯೆ ಸೀರೆ ಸೆಳೆಯಲು। ತ್ವರಿತದಿಂದ ಬಂದು ತರುಣಿ ಮಾನ ಕಾಯ್ದೆಯೊ।।4।। ಹನುಮನಂತೆ ಸೇವೆಯನ್ನು ಮಾಡಲರಿಯೆ ನಾನು। ಮರಣ ಕಾಲದಲ್ಲಿ ನಿನ್ನ ಸ್ಮರಣೆಯನ್ನು ಕರುಣಿಸು।।5।।

ಕೀರ್ತನೆ

ನೀ ಭಜನಗಾನ ರಸಿಕುಲ — **ರಾಗ: ನಾಯಕಿ, ಆದಿತಾಳ**

ನೀ ಭಜನಗಾನ ರಸಿಕುಲ ನೇನೆಂದು ಗಾನರಾ; ರಾಮ।।ಪ।। ಶ್ರೀಭವ ಸರೋಜಾಸನಾದಿ ಶಚೀಮನೋರಮಣ ವಂದ್ಯ ಇಲಲೋ।।ಅ.ಪ।। ಸುಗುಣ ನಿರ್ಗುಣ ನಿಜಪುದಬ್ಬರಲನು ಷಣ್ಮತಮುಲ ಮರ್ಮಮಷ್ಟಸಿದ್ಧುಲ ಪಗಲು ಜೂಪ ಸಂತಸಿಲ್ಲ ಗಂಟಿನಿ; ವರಾನನ ತ್ಯಾಗರಾಜವಿನುತ।।ಚರಣ।।

ಬ್ರಹ್ಮಮೊಕಟೆ ಪರಬ್ರಹ್ಮಮೊಕಟೆ (ಶೃಂಗಾರಕೀರ್ತನಾಲು) — **ರಾಗ: ಭೌಳಿ, ಆದಿತಾಳ**

ಬ್ರಹ್ಮಮೊಕಟೆ ಪರಬ್ರಹ್ಮಮೊಕಟೆ ಪರಬ್ರಹ್ಮಮೊಕಟೆ ಪರಬ್ರಹ್ಮಮೊಕಟೆ। ತಂದಾನಾನ ಅಹಿ ತಂದನಾನ ಪುರೆ ತಂದನಾನ ಭಳಾ ತಂದನಾನ ಭಲಾ।।ಪ।। ಕಂದುವಗು ಹೀನಾಧಿಕ ಮುಲಿಂದು ಲೇವು ಅಂದರಿಕಿ ಶ್ರೀ ಹರೆ ಅಂತರಾತ್ಮಾ।

ಇಂದುಲೋ ಜಂತುಕುಲ ಮಿಂತಾನೊಕಟೆ ಅಂದರಿಕಿ ಶ್ರೀ ಹರೇ ಅಂತರಾತ್ಮಾ॥1॥ ನಿಂಡಾರರಾಜು ನಿದ್ರಿಂಚು ನಿದ್ರಯು ನೊಕಟೆ ಅಂದನೆ ಬಂಟು ನಿದ್ರ ಅದಿಯುಕಟಿ। ಮೆಂಡೈನ ಬ್ರಹ್ಮಣುಡು ಮೆಟ್ಟು ಭೂಮಿಯೊಕಟೆ ಚಂಡಾಲುಡುಂಡೇಟಿ ಸರಿಭೂಮಿಯೊಕಟೆ॥2॥ ಅನುಗು ದೇವತಲಕುನು ಅಲಕಾಮ ಸುಖಮೊಕಟೆ ಘನಕೀಟ ಪಶುವುಲಕು ಕಾಮ ಸುಖಮೊಕಟೆ॥ ದೀನ ಮಹೋರಾತ್ರಮುಲು ತೇಗಿ ಧನಾಡ್ಯುನಕೊಕಟೇ ಒನರ ನಿರುಪೇಡಕುನೊಕಟೆ ಆವಿಯು॥3॥ ಕೊರಲು ಶಿಷ್ಯನ್ನುಮುಲುಗೋನು ನಾಕ್ಕಲೊಕಟೇ ತಿರುಗುದುಷ್ಟಾನಮುಲು ದಿನುನಾಕ್ಕ ಲೊಕಟೇ ಪರಗು ದುರ್ಗಂಧಮು ಲಪ್ಪೈ ವಾಯುಮೊಕಟೆ ವರುಷ ಪರಿಮಳಮುಪ್ಪೈವಾಯುವೊಕಟೆ॥4॥ ಕಡಗಿ ಏನುಗು ಮೀದ ಕಾಯು ಎಂಡೊಕಟೆ ಪುಡಮಿ ಶುನಕಮು ಮೀದ ಪೊಲಯುನೆಂಡೊಕಟೆ। ಕಡು ಪುಣ್ಯಾಲನು ಪಾಪ ಕರ್ಮುಲನು ಸರಿಗಾವ ಜಡಿಯು ಶ್ರೀ ವೇಂಕಟೇಶ್ವರು ನಾಮ ಮೊಕಟೆ॥5॥

ಬ್ರಹ್ಮ ಒಂದೇ ಪರಬ್ರಹ್ಮ ಒಂದೇ (ಮೇಲಿನ ಕೃತಿಯ ಕನ್ನಡ ಭಾವಾನುವಾದ) ರಾಗ: ಭೌಳಿ

ಬ್ರಹ್ಮ ಒಂದೇ ಪರಬ್ರಹ್ಮ ಒಂದೇ॥ಪ॥ ಅಡವಿಯ ಆನೆ ಮೇಲೆ ಕಾಯೋ ಬಿಸಿಲು ಒಂದೇ ಕಾಯುವ ಶುನಕದ ಮೇಲೆ ಬೀಳೋ ಬಿಸಿಲು ಒಂದೇ। ಪುಣ್ಯವಂತರನು ಪಾಪಕರ್ಮರನು ಸರಿಮಾಡೆ ಶ್ರೀ ವೆಂಕಟೇಶ್ವರನ ದಿವ್ಯನಾಮ ಒಂದೇ॥1॥ ಇಳೆಯೊಳು ಹೀನವೆಂಬ ಕುಲವ್ಯಾವುದೂ ಇಲ್ಲ ಎಲ್ಲರಿಗೂ ಶ್ರೀಹರಿಯೆ ಅಂತರಾತ್ಮ ಎಂದಿಗೂ ಜಂತುಜೀವವೆಲ್ಲವೂ ಒಂದೇ ಎಲ್ಲರಿಗೂ ಶ್ರೀಹರಿಯೇ ಅಂತರಾತ್ಮಾ॥2॥ ಸುಪ್ಪತ್ತಿಗೆಯ ಮೇಲೆ ರಾಜನ ನಿದ್ರೆಯು ಒಂದೇ ಕೂಲಿಯ ಬಂಟನ ಆ ನಿದ್ರೆಯು ಒಂದೇ। ಮೇಲೆನ್ನುವ ಬ್ರಾಹ್ಮಣನು ಮೆಟ್ಟೊ ಭೂಮಿಯು ಒಂದೇ। ಚಂಡಾಲನಿರುವ ರುದ್ರ ಭೂಮಿಯು ಒಂದೇ॥3॥

ಮೇಲು ಮೇಲು ರಾಮನಾಮ ರಾಗ: ಸೌರಾಷ್ಟ್ರ, ಆದಿತಾಳ

ಮೇಲು ಮೇಲು ರಾಮನಾಮ ಸುಖಮೀ ಧರಲೋ ಮನಸಾ॥ಪ॥ ಫಾಲಲೋಚನ ವಾಲ್ಮೀಕಾದಿ ಬಾಲಾನಿಲಜಾದುಲು ಸಾಕ್ಷಿಗ॥ಅ.ಪ॥ ನಿಂಡು ದಾಹಮುಕೊನ್ನ ಮನುಜುಲಕು ನೀರು ದ್ರಾಗಿನ ಸುಖಂಬು ಕಂಟೇ ಚಂಡ ದಾರಿದ್ರ ಮನುಜುಲಕು ದನಭಾಂಡ ಮಬ್ಬಿನ ಸುಖಂಬು ಕಂಟೇ ॥ಮೇ...॥ಚರಣ॥1॥ ತಾಪಮು ಸೈರಿಂಚನಿ ಜನುಲಕಮೃತ ವಾಪಿಯಬ್ಬಿನ ಸುಖಂಬು ಕಂಟೇ ದರಿದಾಪು ಲೇಕ ಭಯಮಂದು ವೇಳಲ ಧೈರ್ಯಮು ಗಲ್ಗು ಸುಖಂಬು ಕಂಟೇ॥ಮೇ....॥2॥ ಆಕಲಿ ವೇಳಲ ಪಂಚಭಕ್ಷ್ಯ ಪರಮಾನ್ನಮಿಚ್ಚಿನ ಸುಖಂಬು ಕಂಟೇ ಶ್ರೀಕರುಡೌ ಶ್ರೀರಾಮುನಿ ಮನಸುನ ಚಿಂತಿಂಚು ಸುಖಂಬು ಕಂಟೇ॥ಮೇ....॥3॥ ಸಾರ ಹೀನಮೌ ಕ್ರೋಧ ಸಮಯಮುನ ಶಾಂತಮುಗಲ್ಗು ಸುಖಂಬು ಕಂಟೇ ನೇರನಿ ಮೂಢುಲಕು ಸಕಲ ವಿದ್ಯಾ ಪಾರಮು ದೆಲಿಯು ಸುಖಂಬು ಕಂಟೇ॥ಮೇ....॥4॥ ರಾಮುನಿಪ್ಪೈ ನಿಜಭಕ್ತಿಗಲಿಗಿ ಗಾನ ರಸಮು ದೆಲಿಸಿನ ಸುಖಂಬು ಕಂಟೇ ಪಾಮರ ಚೆಲಿಮಿ ಸೇಯನಿವಾರಿ ಭಾವಮುಲೋನಿ ಸುಖಂಬು ಕಂಟೇ ॥ಮೇ....॥5॥ ಚೇಯತಗು ವೇದಾಂತ ವಿಚಾರಣ ಚೇಯಗಲ್ಗು ಸುಖಂಬು ಕಂಟೇ ಬಾಯಕ ನಿರ್ಗುಣ ಭಾವಮು ಗಲ ಪರಬ್ರಹ್ಮಾನುಭವ ಸುಖಂಬು ಕಂಟೇ॥ಮೇ....॥6॥ ರಾಜಸ ತಾಮಸ ಗುಣಮು ಲೇನಿ ಪೂಜಲು ಗಲ್ಗು ಸುಖಂಬು ಕಂಟೇ ರಾಜ ಶಿಖಾಮಣಿಯ್ಯೆನ ತ್ಯಾಗರಾಜುಕೊಸಂಗು ಸುಖಂಬು ಕಂಟೇ॥ಮೇ....॥7॥

❖ ❖ ❖